



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಹಾಮೀಮ್.

حٰمٓ ۚ ①

2. ಈ ಸುವ್ಯಕ್ತ ಗ್ರಂಥದಾಣೆ-

وَالْكِتٰبِ الْمُبِيْنِ ۙ ②

3. ನಿಶ್ಚಯವಾಗಿಯೂ ನಾವು ಇದನ್ನು ಒಂದು ಮಹಾ ಸಮೃದ್ಧ ರಾತ್ರಿಯಲ್ಲಿ ಅವತೀರ್ಣಗೊಳಿಸಿದೆವು.[1] ಏಕೆಂದರೆ, ನಾವು ಜನರಿಗೆ ಎಚ್ಚರಿಕೆ ನೀಡಲಿಚ್ಛಿಸಿದೆವು.

اِنَّآ اَنْزَلْنٰهُ فِيْ لَيْلَةٍ مُّبٰرَكَةٍ اِنَّا كُنَّا مُنْذِرِيْنَ ③

4-5. ಅದು ನಮ್ಮ ಅಪ್ಪಣೆಯಿಂದ ಸಕಲ ವಿಷಯಗಳ ಯುಕ್ತಿಪೂರ್ಣವಾದ ತೀರ್ಪು ಸಾದರ ಗೊಳಿಸುವಂತಹ ರಾತ್ರಿಯಾಗಿತ್ತು.[2] ನಾವು ಓರ್ವ ಸಂದೇಶವಾಹಕನನ್ನು ಕಳುಹಿಸಲಿದ್ದೆವು.

فِيْهَا يُفْرَقُ كُلُّ اَمْرٍ حَكِيْمٍ ۙ ④
اَمْرًا مِّنْ عِنْدِنَا ۭ اِنَّا كُنَّا مُرْسِلِيْنَ ⑤

6. ನಿನ್ನ ಪ್ರಭುವಿನ ಅನುಗ್ರಹದ ರೂಪದಲ್ಲಿ! ನಿಶ್ಚಯವಾಗಿಯೂ ಅವನೇ ಸರ್ವವನ್ನೂ ಆಲಿಸುವವನು ಮತ್ತು ಸರ್ವವನ್ನೂ ಅರಿಯುವವನಾಗಿದ್ದಾನೆ.

رَحْمَةً مِّنْ رَّبِّكَ ۭ اِنَّهٗ هُوَ السَّمِيْعُ الْعَلِيْمُ ۙ ⑥

7. ಭೂಮಿ-ಆಕಾಶಗಳ ಹಾಗೂ ಅವುಗಳ ನಡುವೆ ಇರುವ ಪ್ರತಿಯೊಂದು ವಸ್ತುವಿನ ಪ್ರಭು; ನೀವು ನಿಜಕ್ಕೂ ನಂಬಿಕೆಯುಳ್ಳವರಾಗಿದ್ದರೆ.

رَبِّ السَّمٰوٰتِ وَالْاَرْضِ وَمَا بَيْنَهُمَا ۘ اِنْ كُنْتُمْ مُّوْقِنِيْنَ ⑦

8. ಅವನ ಹೊರತು ಇತರ ಆರಾಧ್ಯರಾರೂ ಇಲ್ಲ.[3] ಅವನೇ

لَآ اِلٰهَ اِلَّا هُوَ يُحْيٖ وَيُمِيْتُ ۭ رَبُّكُمْ

1. ಅರ್ಥಾತ್- 'ಲೈಲತುಲ್ ಕದ್ರ್' ಅಥವಾ ವಿಧಿನಿರ್ಣಾಯಕ ರಾತ್ರಿ.
2. ಅಲ್ಲಾಹನ ದಿವ್ಯ ವ್ಯವಸ್ಥೆಯಲ್ಲಿ ವ್ಯಕ್ತಿ, ಜನಾಂಗ ಮತ್ತು ರಾಷ್ಟ್ರಗಳ ವಿಧಿಯನ್ನು ನಿಶ್ಚಯಿಸಿ ಅದನ್ನು ದೇವಚರರಿಗೆ ಒಪ್ಪಿಸಿ ಬಿಡುವಂತಹ ರಾತ್ರಿಯೊಂದಿದೆ. ಅನಂತರ ಅವರು ಅದನ್ನೇ ಕೃತಿಗಿಳಿಸುತ್ತಾರೆ ಎಂದು ಇದರಿಂದ ತಿಳಿದು ಬರುತ್ತದೆ.
3. ಆರಾಧ್ಯ ಎಂದರೆ ದಾಸ್ಯ-ಆರಾಧನೆಗಳಿಗೆ ಅರ್ಹನಾದ ನೈಜ ಆರಾಧ್ಯ.

ಜೀವಂತಗೊಳಿಸುತ್ತಾನೆ ಮತ್ತು ಅವನೇ ಮರಣ ಕೊಡುತ್ತಾನೆ. ಅವನೇ ನಿಮ್ಮ ಪ್ರಭು ಮತ್ತು ನಿಮಗಿಂತ ಮುಂಚೆ ಗತಿಸಿದ ಪೂರ್ವಜರ ಪ್ರಭು.

وَرَبُّ اٰبَآئِكُمُ الْاَوَّلِيْنَ ﴿٨﴾

9. (ಆದರೆ ವಾಸ್ತವದಲ್ಲಿ ಇವರಿಗೆ ನಂಬಿಕೆ ಇಲ್ಲ.) ಅಷ್ಟೇ ಅಲ್ಲ ಇವರು ಸಂಶಯದಲ್ಲೇ ಬಿದ್ದು ಆಟವಾಡುತ್ತಿದ್ದಾರೆ.

بَلْ هُمْ فِيْ شَكٍّ يَّلْعَبُوْنَ ﴿٩﴾

10-11. ಸರಿ, ಆಕಾಶವು ಸ್ಪಷ್ಟವಾದ ಹೊಗೆಯೊಂದಿಗೆ ಬಂದು ಜನರನ್ನು ಆವರಿಸಿಕೊಳ್ಳಲಿರುವ ಆ ದಿನಕ್ಕಾಗಿ ಕಾಯಿರಿ. ಇದುವೇ ಯಾತನಾಮಯ ಶಿಕ್ಷೆಯಾಗಿದೆ.

فَارْتَقِبْ يَوْمَ تَاْتِي السَّمَآءُ بِدُخَانٍ مُّبِيْنٍ ﴿١٠﴾
يَّغْشَى النَّاسَ ۭ هٰذَا عَذَابٌ اَلِيْمٌ ﴿١١﴾

12. (ಇವರೀಗ) ನಮ್ಮ ಪ್ರಭು! ನಮ್ಮ ಮೇಲಿಂದ ಈ ಯಾತನೆಯನ್ನು ನೀಗಿಸು, ನಾವು ಸತ್ಯವಿಶ್ವಾಸಿಗಳಾಗುತ್ತೇವೆ (ಎನ್ನುತ್ತಿದ್ದಾರೆ)[4] -

رَبَّنَا اكْشِفْ عَنَّا الْعَذَابَ اِنَّا مُؤْمِنُوْنَ ﴿١٢﴾

13. ಇವರ ಅನಾಸ್ಥೆಯು ದೂರವಾಗುವುದೆಂದು? ಇವರ ಬಳಿಗೆ ಪ್ರತ್ಯಕ್ಷ ಸಂದೇಶವಾಹಕ ಬಂದಿದ್ದರು.[5]

اَنّٰى لَهُمُ الذِّكْرٰى وَقَدْ جَآءَهُمْ رَسُوْلٌ مُّبِيْنٌ ﴿١٣﴾

14. ಆದರೂ ಇವರು ಅವರ ಕಡೆಗೆ ಗಮನ ಹರಿಸಲಿಲ್ಲ ಮತ್ತು "ಇವನೊಬ್ಬ ಕಲಿಸಲ್ಪಟ್ಟ ಹುಚ್ಚ" ಎಂದರು.

ثُمَّ تَوَلَّوْا عَنْهُ وَقَالُوْا مُعَلَّمٌ مَّجْنُوْنٌ ﴿١٤﴾

15. ನಾವು ಯಾತನೆಯನ್ನು ಕಿಂಚಿತ್ ಸರಿಸಿಬಿಟ್ಟರೆ ನೀವು ಮೊದಲು ಮಾಡುತ್ತಿದ್ದುದನ್ನೇ ಪುನಃ ಮಾಡುವಿರಿ.

اِنَّا كَاشِفُوا الْعَذَابِ قَلِيْلًا اِنَّكُمْ عَآئِدُوْنَ ﴿١٥﴾

16. ನಾವು ಭಾರೀ ಹೊಡೆತ ನೀಡಲಿರುವ ದಿನವೇ ನಾವು ನಿಮ್ಮ ಮೇಲೆ ಸೇಡು ತೀರಿಸುವ ದಿನವಾಗಿರುವುದು.

يَوْمَ نَبْطِشُ الْبَطْشَةَ الْكُبْرٰى ۚ اِنَّا مُنْتَقِمُوْنَ ﴿١٦﴾

17. ನಾವು ಇವರಿಗಿಂತ ಮುಂಚೆ ಫಿರ್‌ಔನನ ಜನಾಂಗವನ್ನು ಇದೇ ಪರೀಕ್ಷೆಗೆ ಒಳಪಡಿಸಿದ್ದೆವು. ಅವರ ಬಳಿಗೆ ಓರ್ವ ಸನ್ಮಾನ್ಯ ಸಂದೇಶವಾಹಕರು ಬಂದರು-

وَلَقَدْ فَتَنَّا قَبْلَهُمْ قَوْمَ فِرْعَوْنَ وَجَآءَهُمْ
رَسُوْلٌ كَرِيْمٌ ﴿١٧﴾

18. (ಅವರು ಹೀಗೆ ಹೇಳಿದರು)- "ಅಲ್ಲಾಹನ ದಾಸರನ್ನು ನನ್ನ ವಶಕ್ಕೆ ಒಪ್ಪಿಸಿ ಬಿಡಿರಿ. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ-

اَنْ اَدُّوْٓا اِلَيَّ عِبَادَ اللّٰهِ ۭ اِنِّيْ لَكُمْ
رَسُوْلٌ اَمِيْنٌ ﴿١٨﴾

4. ಈ ಸೂಕ್ತ ಮತ್ತು 16ನೆಯ ಸೂಕ್ತದಲ್ಲಿ ನಿರ್ಣಾಯಕ ದಿನದ ಯಾತನೆಯ ಪ್ರಸ್ತಾಪವಿದೆ. 15ನೆಯ ಸೂಕ್ತದಲ್ಲಿರುವ ಯಾತನೆಯ ಪ್ರಸ್ತಾಪ ಈ ಅಧ್ಯಾಯದ ಅವತೀರ್ಣದ ವೇಳೆ ಮಕ್ಕಾದ ಜನರು ಈಡಾಗಿದ್ದ 'ಬರಗಾಲ'ದ ಯಾತನೆಯಾಗಿದೆ.

5. ಅರ್ಥಾತ್- ಪ್ರವಾದಿತ್ವವು ಅತ್ಯಂತ ವ್ಯಕ್ತವಾಗಿರುವಂತಹ ಪ್ರವಾದಿ.

19. ಅಲ್ಲಾಹನ ವಿರುದ್ಧ ವಿದ್ರೋಹವೆಸಗಬೇಡಿ. ನಾನು (ನನ್ನ ಪ್ರವಾದಿತ್ವದ ಬಗ್ಗೆ) ಸುಸ್ಪಷ್ಟ ಪುರಾವೆಯನ್ನು ನಿಮ್ಮ ಮುಂದಿಡುತ್ತೇನೆ.

وَّ اَنْ لَّا تَعْلُوْا عَلَى اللّٰهِ ۚ اِنِّيْٓ اٰتِيْكُمْ
بِسُلْطٰنٍ مُّبِيْنٍ ﴿١٩﴾

20. ನೀವು ನನ್ನ ಮೇಲೆ ಹಲ್ಲೆ ನಡೆಸುವುದರ ಬಗ್ಗೆ ನಾನು ನನ್ನ ಮತ್ತು ನಿಮ್ಮ ಪ್ರಭುವಿನ ಅಭಯ ಪಡೆದಿರುತ್ತೇನೆ.

وَاِنِّيْ عُذْتُ بِرَبِّيْ وَرَبِّكُمْ اَنْ تَرْجُمُوْنِ ﴿٢٠﴾

21. ನೀವು ನನ್ನ ಮಾತು ಕೇಳದಿದ್ದರೆ ನನ್ನ ಮೇಲೆ ಕೈ ಮಾಡುವುದರಿಂದ ದೂರವಿರಿ."

وَاِنْ لَّمْ تُؤْمِنُوْا لِيْ فَاعْتَزِلُوْنِ ﴿٢١﴾

22. ಕೊನೆಗೆ ಅವರು ತಮ್ಮ ಪ್ರಭುವನ್ನು ಕೂಗಿ, "ಇವರೊಂದು ಅಪರಾಧಿ ಜನಾಂಗದವರಾಗಿದ್ದಾರೆ" ಎಂದರು.

فَدَعَا رَبَّهٗٓ اَنَّ هٰٓؤُلَآءِ قَوْمٌ مُّجْرِمُوْنَ ﴿٢٢﴾

23. (ಅದಕ್ಕೆ ಉತ್ತರವಾಗಿ ಹೀಗೆ ಹೇಳಲಾಯಿತು) "ಹಾಗಿದ್ದರೆ ನೀವು ರಾತೋರಾತ್ರಿ ನನ್ನ ದಾಸರನ್ನು ಕರೆದುಕೊಂಡು ಹೋಗಿಬಿಡಿರಿ. ನಿಮ್ಮನ್ನು ಬೆನ್ನಟ್ಟಲಾಗುವುದು-

فَاَسْرِ بِعِبَادِيْ لَيْلًا اِنَّكُمْ مُّتَّبَعُوْنَ ﴿٢٣﴾

24. ಸಮುದ್ರವನ್ನು ಅದರ ಪಾಡಿಗೆ ತೆರೆದೇ ಇಡಲು ಬಿಡಿರಿ. ಈ ಸೇನೆಯು ಸಂಪೂರ್ಣ ಮುಳುಗಿ ಹೋಗುವುದು."

وَاتْرُكِ الْبَحْرَ رَهْوًا ۭ اِنَّهُمْ جُنْدٌ
مُّغْرَقُوْنَ ﴿٢٤﴾

25-26. ಅವರು ಅದೆಷ್ಟೋ ಉದ್ಯಾನಗಳನ್ನೂ ಚಿಲುಮೆಗಳನ್ನೂ ಹೊಲಗಳನ್ನೂ ಭವ್ಯ ಅರಮನೆಗಳನ್ನೂ ಬಿಟ್ಟು ಹೋದರು.

كَمْ تَرَكُوْا مِنْ جَنّٰتٍ وَّعُيُوْنٍ ﴿٢٥﴾
وَّزُرُوْعٍ وَّمَقَامٍ كَرِيْمٍ ﴿٢٦﴾

27. ಅವರು ಸುಖಿಸುತ್ತಿದ್ದ ಎಷ್ಟೋ ಭೋಗ ಸಾಮಗ್ರಿಗಳು ಅವರ ಹಿಂದೆಯೇ ಉಳಿದು ಬಿಟ್ಟವು-

وَّنَعْمَةٍ كَانُوْا فِيْهَا فٰكِهِيْنَ ﴿٢٧﴾

28. ಅವರ ಅಂತ್ಯ ಹೀಗಾಯಿತು. ನಾವು ಇತರರನ್ನು ಈ ವಸ್ತುಗಳ ವಾರೀಸುದಾರರಾಗಿ ಮಾಡಿದೆವು.

كَذٰلِكَ ۣ وَاَوْرَثْنٰهَا قَوْمًا اٰخَرِيْنَ ﴿٢٨﴾

29. ತರುವಾಯ ಆಕಾಶವಾಗಲಿ-ಭೂಮಿಯಾಗಲಿ ಅವರಿಗಾಗಿ ರೋದಿಸಲಿಲ್ಲ ಮತ್ತು ಒಂದಿಷ್ಟು ಕಾಲಾವಕಾಶವನ್ನೂ ಅವರಿಗೆ ನೀಡಲಾಗಲಿಲ್ಲ.

فَمَا بَكَتْ عَلَيْهِمُ السَّمَاۗءُ وَالْاَرْضُ وَمَا
كَانُوْا مُنْظَرِيْنَ ﴿٢٩﴾

30-31. ಹೀಗೆ ನಾವು ಬನೀಇಸ್ರಾಈಲರನ್ನು ನಿಂದನೀಯ

وَلَقَدْ نَجَّيْنَا بَنِيْٓ اِسْرَاۗءِيْلَ مِنَ
الْعَذَابِ الْمُهِيْنِ ﴿٣٠﴾

ಯಾತನೆಯಿಂದಲೂ ಮಿತಿಮೀರಿ ಸಾಗುವವರ ಪೈಕಿ ನಿಜಕ್ಕೂ ಅತ್ಯಂತ ಮೇಲ್ಮಟ್ಟದವನಾಗಿದ್ದ ಫಿರ್‌ಔನನಿಂದಲೂ ಮುಕ್ತಿ ನೀಡಿದೆವು.	مِنْ فِرْعَوْنَ ۚ إِنَّهُ كَانَ عَالِيًا مِّنَ الْمُسْرِفِينَ ﴿٣١﴾
32. ನಾವು, ಅವರ ಅವಸ್ಥೆಯನ್ನು ತಿಳಿದಿರುತ್ತಲೇ ಅವರಿಗೆ ಜಗತ್ತಿನ ಇತರ ಜನಾಂಗಗಳ ಮೇಲೆ ಪ್ರಾಶಸ್ತ್ಯ ನೀಡಿದೆವು-	وَلَقَدِ اخْتَرْنَاهُمْ عَلَىٰ عِلْمٍ عَلَى الْعَالَمِينَ ﴿٣٢﴾
33. ಮತ್ತು ಸುಸ್ಪಷ್ಟ ಪರೀಕ್ಷೆಯಿದ್ದ ನಿದರ್ಶನಗಳನ್ನು ಅವರಿಗೆ ತೋರಿಸಿ ಕೊಟ್ಟೆವು.	وَآتَيْنَاهُم مِّنَ الْآيَاتِ مَا فِيهِ بَلَاءٌ مُّبِينٌ ﴿٣٣﴾
34. ಇವರು ಹೇಳುತ್ತಾರೆ:	إِنَّ هَٰؤُلَاءِ لَيَقُولُونَ ﴿٣٤﴾
35. "ನಮ್ಮ ಪ್ರಥಮ ಬಾರಿಯ ಮೃತ್ಯುವಿನ ಹೊರತು ಬೇರೇನೂ ಇಲ್ಲ. ಆ ಬಳಿಕ ನಾವು ಪುನಃ ಎಬ್ಬಿಸಲ್ಪಡಲಾರೆವು.	إِنْ هِيَ إِلَّا مَوْتَتُنَا الْأُولَىٰ وَمَا نَحْنُ بِمُنشَرِينَ ﴿٣٥﴾
36. ನೀವು ಸತ್ಯವಾದಿಯಾಗಿದ್ದರೆ ನಮ್ಮ ಪೂರ್ವಜರನ್ನು ಎಬ್ಬಿಸಿ ತನ್ನಿರಿ."	فَأْتُوا بِآبَائِنَا إِن كُنتُمْ صَادِقِينَ ﴿٣٦﴾
37. ಇವರು ಉತ್ತಮರೋ ಅಥವಾ 'ತುಬ್ಬಅ್' ಜನಾಂಗ ಮತ್ತು ಅದಕ್ಕಿಂತ ಹಿಂದಿನವರು ಉತ್ತಮರೋ[6] ಅವರು ಅಪರಾಧಿಗಳಾಗಿದ್ದುದರಿಂದಲೇ ನಾವು ಅವರನ್ನು ನಾಶಗೊಳಿಸಿದೆವು.	أَهُمْ خَيْرٌ أَمْ قَوْمُ تُبَّعٍ وَالَّذِينَ مِن قَبْلِهِمْ ۚ أَهْلَكْنَاهُمْ ۖ إِنَّهُمْ كَانُوا مُجْرِمِينَ ﴿٣٧﴾
38. ಈ ಭೂಮಿ-ಆಕಾಶಗಳನ್ನೂ ಅವುಗಳ ನಡುವೆ ಇರುವ ವಸ್ತುಗಳನ್ನೂ ನಾವೇನೂ ಲೀಲೆಗಾಗಿ ಉಂಟು ಮಾಡಿದುದಲ್ಲ.	وَمَا خَلَقْنَا السَّمَاوَاتِ وَالْأَرْضَ وَمَا بَيْنَهُمَا لَاعِبِينَ ﴿٣٨﴾
39. ನಾವು ಅವುಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿದ್ದೇವೆ. ಆದರೆ ಇವರಲ್ಲಿ ಹೆಚ್ಚಿನವರು ಅರಿಯುವುದಿಲ್ಲ.	مَا خَلَقْنَاهُمَا إِلَّا بِالْحَقِّ وَلَٰكِنَّ أَكْثَرَهُمْ لَا يَعْلَمُونَ ﴿٣٩﴾
40. ಇವರೆಲ್ಲರೂ ಎಬ್ಬಿಸಲ್ಪಡಲು ನಿಶ್ಚಿತವಾಗಿರುವ ಸಮಯವು ತೀರ್ಪಿನ ದಿನವಾಗಿದೆ.	إِنَّ يَوْمَ الْفَصْلِ مِيقَاتُهُمْ أَجْمَعِينَ ﴿٤٠﴾
41. ಅಂದು ಯಾವನೇ ನಿಕಟ ಬಂಧು ತನ್ನ ನಿಕಟಬಂಧುವಿಗೆ ಸ್ವಲ್ಪವೂ ಉಪಯುಕ್ತನಾಗಲಾರನು ಮತ್ತು ಅವರಿಗೆ ಎಲ್ಲಿಂದಲೂ ಸಹಾಯ ಒದಗಲಾರದು.	يَوْمَ لَا يُغْنِي مَوْلًى عَن مَّوْلًى شَيْئًا وَلَا هُمْ يُنصَرُونَ ﴿٤١﴾

6. 'ತುಬ್ಬಅ್' ಎಂಬುದು 'ಹಿಮ್‌ಯರ್' ಗೋತ್ರದ ರಾಜರುಗಳ ಬಿರುದಾಗಿತ್ತು. ಇದು ಬೇರೆ ಬೇರೆ ದೇಶದ ರಾಜರುಗಳಿಗೆ 'ಕಿಸ್ರಾ', 'ಕೈಸರ್' ಮತ್ತು 'ಫಿರ್‌ಔನ್' ಮುಂತಾದ ಹೆಸರುಗಳಿದ್ದಂತೆಯೇ ಇದೆ. ಇವರು 'ಸಬಾ' ಜನಾಂಗದ ಒಂದು ಶಾಖೆಯಾಗಿದ್ದರು. ಅರೇಬಿಯಾದಲ್ಲಿ ಇವರು ಶತಮಾನಗಳ ಕಾಲ ಆಡಳಿತ ನಡೆಸುತ್ತಿದ್ದರು.

42. ಯಾರ ಮೇಲಾದರೂ ಅಲ್ಲಾಹನೇ ಕೃಪೆ ತೋರುವುದರ ಹೊರತು. ಅವನು ಮಹಾಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.
إِلَّا مَن رَّحِمَ اللَّهُ ۚ إِنَّهُ هُوَ الْعَزِيزُ الرَّحِيمُ ﴿٤٢﴾

43. 'ಝಕ್ಕೂಮ್' ವೃಕ್ಷವು-
إِنَّ شَجَرَتَ الزَّقُّومِ ﴿٤٣﴾

44. ಪಾಪಿಗಳ ಆಹಾರವಾಗಿರುವುದು-
طَعَامُ الْأَثِيمِ ﴿٤٤﴾ معانقة ١٤

45. ಎಣ್ಣೆಯ ಮಡ್ಡಿಯಂತೆ.- ಅದು ಹೊಟ್ಟೆಯೊಳಗೆ ಕುದಿಯುತ್ತಿರುವುದು.
كَالْمُهْلِ ۛ يَغْلِي فِي الْبُطُونِ ﴿٤٥﴾

46. ಬಿಸಿ ನೀರು ಕುದಿಯುತ್ತಿರುವಂತೆ.
كَغَلْيِ الْحَمِيمِ ﴿٤٦﴾

47. "ಇವನನ್ನು ಹಿಡಿಯಿರಿ, ದರದರನೆ ಎಳೆಯುತ್ತ ನರಕದ ನಡು ಮಧ್ಯಕ್ಕೆ ಒಯ್ಯಿರಿ-
خُذُوهُ فَاعْتِلُوهُ إِلَىٰ سَوَاءِ الْجَحِيمِ ﴿٤٧﴾

48. ಮತ್ತು ಇವನ ತಲೆಯ ಮೇಲೆ ಕುದಿಯುವ ನೀರಿನ ಯಾತನೆಯನ್ನು ಸುರಿದು ಬಿಡಿರಿ.
ثُمَّ صُبُّوا فَوْقَ رَأْسِهِ مِنْ عَذَابِ الْحَمِيمِ ﴿٤٨﴾

49. ಇದರ ರುಚಿಯನ್ನು ಸವಿದುಕೋ. ನೀನೊಬ್ಬ ಮಹಾ ಮರ್ಯಾದಸ್ಥ!
ذُقْ إِنَّكَ أَنتَ الْعَزِيزُ الْكَرِيمُ ﴿٤٩﴾

50. ನೀವೆಲ್ಲ ಸಂದೇಹ ಪಡುತ್ತಿದ್ದುದು ಇದರ ಬಗೆಗೇ ಆಗಿದೆ."
إِنَّ هَٰذَا مَا كُنتُم بِهِ تَمْتَرُونَ ﴿٥٠﴾

51. ದೇವಭಯವುಳ್ಳವರು ಶಾಂತಿಧಾಮದಲ್ಲಿರುವರು,
إِنَّ الْمُتَّقِينَ فِي مَقَامٍ أَمِينٍ ﴿٥١﴾

52. ಸ್ವರ್ಗೋದ್ಯಾನಗಳಲ್ಲೂ ಚಿಲುಮೆಗಳಲ್ಲೂ-
فِي جَنَّاتٍ وَعُيُونٍ ﴿٥٢﴾

53. 'ರೇಶ್ಮೆ- ಜರತಾರಿ' ಬಟ್ಟೆಗಳನ್ನು ಉಟ್ಟುಕೊಂಡು ಎದುರು ಬದುರಾಗಿ ಕುಳಿತಿರುವರು.
يَلْبَسُونَ مِن سُندُسٍ وَإِسْتَبْرَقٍ مُّتَقَابِلِينَ ﴿٥٣﴾

54. ಇದು ಅವರ ವೈಭವ ಮತ್ತು ನಾವು ಹರಿಣಾಕ್ಷಿಗಳುಳ್ಳ ಸುಂದರಾಂಗನೆಯರೊಂದಿಗೆ ಅವರ ವಿವಾಹ ಮಾಡಿಸುವೆವು.
كَذَٰلِكَ وَزَوَّجْنَاهُم بِحُورٍ عِينٍ ﴿٥٤﴾

55. ಅಲ್ಲಿ ಅವರು ನಿಶ್ಚಿಂತರಾಗಿ ಎಲ್ಲ ತರದ ರುಚಿಕರವಾದ ವಸ್ತುಗಳನ್ನು ತರಿಸಿಕೊಳ್ಳುವರು.
يَدْعُونَ فِيهَا بِكُلِّ فَاكِهَةٍ آمِنِينَ ﴿٥٥﴾

لَا يَذُوقُونَ فِيهَا الْمَوْتَ إِلَّا الْمَوْتَةَ
الْأُولَىٰ ۖ وَوَقَاهُمْ عَذَابَ الْجَحِيمِ ﴿٥٦﴾
فَضْلًا مِّن رَّبِّكَ ۚ ذَٰلِكَ هُوَ
الْفَوْزُ الْعَظِيمُ ﴿٥٧﴾

56-57. ಭೂಲೋಕದಲ್ಲಿ ಬಂದ ಮರಣದ ಹೊರತು ಅಲ್ಲಿ ಅವರೆಂದೂ ಮರಣದ ರುಚಿಯನ್ನು ಸವಿಯಲಾರರು. ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ನರಕ ಯಾತನೆಯಿಂದ ರಕ್ಷಿಸುವನು. ಇದುವೇ ಅತಿ ದೊಡ್ಡ ಯಶಸ್ಸು.

فَإِنَّمَا يَسَّرْنَاهُ بِلِسَانِكَ لَعَلَّهُمْ يَتَذَكَّرُونَ ﴿٥٨﴾

58. ಸಂದೇಶವಾಹಕರೇ, ಇವರು ಉಪದೇಶ ಪಡೆಯಲೆಂದು ನಾವು ಈ ಗ್ರಂಥವನ್ನು ನಿಮ್ಮ ಭಾಷೆಯಲ್ಲಿ ಸರಳಗೊಳಿಸಿದ್ದೇವೆ.

فَارْتَقِبْ إِنَّهُم مُّرْتَقِبُونَ ﴿٥٩﴾

59. ಇನ್ನು ನೀವೂ ಕಾಯಿರಿ, ಇವರೂ ಕಾಯುತ್ತಿದ್ದಾರೆ.
